ಕೊನೆಯಪಕ್ಷ 3 ತಿಂಗಳಾದರೂ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುತ್ತೀರಾ ಎಂದು ಕೇಳತಕ್ಕಂಥದ್ದನ್ನು ತಾವೇನಾದರೂ ತಮ್ಮ ಸರ್ಕಾರದಲ್ಲಿ ಇಟ್ಟುಕೊಂಡಿದ್ದೀರೋ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಚಿತ್ರದ ನೀತಿ, ಸಂದೇಶ ಮತ್ತು ರೂಪುರೇಷೆಗಳು ಹಾಗೂ ನೋಡುವವರ ಮೇಲೆ ಅದು ಅವಲಂಭಿತವಾಗಿದೆ. ಕರ್ನಾಟಕದಲ್ಲಿ ಕನ್ನಡ ಚಲನಚಿತ್ರಗಳಿಗೆ ಆದ್ಯತೆ ಕೊಡಬೇಕೆಂದೇ ಶೇಕಡ ನೂರರಷ್ಟು ಮನರಂಜನಾ ತೆರಿಗೆಯನ್ನು ಕೊಡಲಾಗಿದೆ. ಬಾಕಿ ಯಾವ ಚಿತ್ರಗಳಿಗೂ ನಾವು ಕೊಡುತ್ತಿಲ್ಲ. ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಈಗಿನ ಸಂದರ್ಭದಲ್ಲಿ ತಯಾರಾಗುತ್ತಿರುವ ಚಿತ್ರಗಳಿಗೆ ಕೊಡುತ್ತಿರುವ ಹೆಸರುಗಳನ್ನು ನೋಡಿದರೆ ಏತಕ್ಕಾಗಿ ಸಹಾಯ ಧನ ಕೊಡಬೇಕೆನ್ನುವ ಪ್ರಶ್ನೆ ಉದ್ಭವಿಸುತ್ತದೆ.

ದ. ಕನ್ನಡ ಜಿಲ್ಲೆಯ ಮೀನುಗಾರರಿಗೆ ಸಂದಾಯ ಮಾಡಿದ ಪರಿಹಾರ.

314 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಅತಿಯಾದ ಮಳೆಯಿಂದ ಮೀನುಗಾರರು ವಾಸವಾಗಿರುವ ಮನೆಗಳು ಬಿದ್ದುಹೋಗಿರುವ ಪ್ರಕರಣಗಳೆಷ್ಟು? (ತಾಲ್ಲೂಕುವಾರು ವಿವರವನ್ನು ಒದಗಿಸುವುದು)*

ಆ) *ಮೀನುಗಾರಿಕಾ ಇಲಾಖೆಯಿಂದ ಆಂಶಿಕ ಹಾಗೂ ಪೂರ್ಣ ಹಾನಿಯಾದ ಮನೆಗಳಿಗೆ ಕೊಟ್ಟ ಪರಿಹಾರ ಎಷ್ಟು? (ತಾಲ್ಲೂಕುವಾರು ಫಲಾನುಭವಿಗಳ ಹೆಸರು, ವಿಳಾಸ ತಿಳಿಸುವುದು)*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಒಟ್ಟು 32 ಮನೆಗಳು (ಆಂಶಿಕವಾಗಿ)

1) ಉಡುಪಿ ತಾಲ್ಲೂಕು - 8 ಮನೆಗಳು

2) ಕುಂದಾಪುರ ತಾಲ್ಲೂಕು - 24 ಮನೆಗಳು

ಆ) ಮೀನುಗಾರಿಕೆ ಇಲಾಖೆಯಿಂದ ಪರಿಹಾರ ನೀಡಿರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕಂಥ ಉತ್ತರ ಪರಿಪೂರ್ಣವಾಗಿಲ್ಲವೆಂದು ನನ್ನ ಅನಿಸಿಕೆ. ಏಕೆಂದರೆ, ಉಡುಪಿ ತಾಲ್ಲೂಕಿನಲ್ಲಿ 8 ಮನೆಗಳು ಮತ್ತು ಕುಂದಾಪುರದಲ್ಲಿ 26 ಮನೆಗಳು ಹೋಗಿವೆ ಎನ್ನತಕ್ಕಂಥ ವರದಿಯನ್ನು ಕೊಟ್ಟಿದ್ದಾರೆ. ಮೀನುಗಾರಿಕೆ ಇಲಾಖೆಯವರು ಪರಿಹಾರ ಕೊಡದೇ ಇರುವುದರಿಂದ ಮನೆಗಳು ನಾಶವಾಗಿರುವ ಬಗ್ಗೆ ಸರಿಯಾದ ಅಂಕಿ ಸಂಖ್ಯೆಗಳು ಸಿಗುವುದಿಲ್ಲ. ಕರಾವಳಿ ಪ್ರದೇಶದಲ್ಲಿ ಒಟ್ಟು 9 ವಿಧಾನ ಸಭಾ

ಕ್ಷೇತ್ರಗಳು ಬರುತ್ತವೆ. ಇದರಲ್ಲಿ ಎರಡು ವಿಧಾನ ಕ್ಷೇತ್ರಗಳಲ್ಲಿ ಮಾತ್ರ 24 ಮನೆಗಳಿಗೆ ಪರಿಹಾರ ಕೊಡಲಾಗಿದೆ. ಮಂಗಳೂರು ಕ್ಷೇತ್ರದಲ್ಲಂತೂ ಒಂದು ಮನೆಯವರಿಗೂ ಪರಿಹಾರವನ್ನು ಕೊಟ್ಟಿಲ್ಲ. ಆಮೇಲೆ ಸಂಕಷ್ಟ ಪರಿಹಾರ ನಿಧಿ ಎನ್ನತಕ್ಕಂಥಾದ್ದು ಮೀನುಗಾರಿಕಾ ಇಲಾಖೆಯಲ್ಲಿ ಇದೆ. ಆ ನಿಧಿಯಲ್ಲಿ ದೋಣಿಗಳನ್ನು ಹಾಳು ಮಾಡಿಕೊಂಡವರಿಗೆ ಪರಿಹಾರ ಕೊಡಲಾಗುತ್ತದೆ, ಆದರೆ ಮನೆಗಳನ್ನು ಕಳೆದುಕೊಂಡವರಿಗೆ ಕೊಡುವುದಿಲ್ಲ. ಆದ್ದರಿಂದ, ಮನೆಗಳನ್ನು ಕಳೆದುಕೊಳ್ಳುವವರಿಗೆ ತುರ್ತು ಪರಿಹಾರ ಕೊಡುವುದಕ್ಕಾಗಿ ಮೀನುಗಾರಿಕಾ ಇಲಾಖೆಯಲ್ಲಿ ಕ್ರಮವನ್ನು ಹಾಕಿಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ಮನೆ ಹಾಳಾಗಿರುವ ಬಗ್ಗೆ ಸರಿಯಾದ ಅಂಕಿ ಸಂಖ್ಯೆಗಳು ಮೀನುಗಾರಿಕೆ ಇಲಾಖೆಯಲ್ಲಿ ಸಿಗುವುದಿಲ್ಲವೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದು ನಿಜ. ನೆರೆ ಹಾವಳಿಯಿಂದ ಬಿದ್ದಂಥ ಮನೆಗಳಿಗೆ ಕಂದಾಯ ಇಲಾಖೆಯವರು ಪರಿಹಾರವನ್ನು ಕೊಟ್ಟು ಅದರ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆಯೇ ಹೊರತು, ನಮ್ಮ ಇಲಾಖೆಯಿಂದ ಪರಿಹಾರ ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿಲ್ಲ. ಎರಡು ಇಲಾಖೆಯಿಂದ ಒಂದೇ ರೀತಿಯ ಪರಿಹಾರ ಕೊಡುವುದಕ್ಕಾಗುವುದಿಲ್ಲ. ಸಮುದ್ರದಲ್ಲಿ ಮೀನುಗಾರಿಕೆ ಮಾಡಲು ಹೋಗಿ ದೋಣಿಗಳು ಹಾಳಾದರೆ, ಅಂಥವಕ್ಕೆ ನಾವು ಪರಿಹಾರವನ್ನು ಕೊಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಎರಡೂ ಇಲಾಖೆಯಿಂದ ಪರಿಹಾರ ಸಿಗದೆ ಇರುವುದೇ ಸಮಸ್ಯೆಯಾಗಿದೆ. ಮೀನುಗಾರಿಕಾ ಇಲಾಖೆಯವರಿಗೆ ಇದರ ಬಗ್ಗೆ ಕಾಳಜಿ ಇಲ್ಲ. ಕಂದಾಯ ಇಲಾಖೆಯವರು ಲೆಕ್ಕ ಕೊಡುವುದಿಲ್ಲ.

ಅಧ್ಯಕ್ಷರು : ಇದಕ್ಕೆ ಒಂದು ಸಲ್ಯೂಷನ್ ಕಂಡು ಹಿಡಿಯೋಣ. ಮಾನ್ಯ ಸದಸ್ಯರ ಪ್ರಶ್ನೆ ಬಹಳ ಪ್ರಾಮಾಣಿಕವಾಗಿದೆ. ಮೀನುಗಾರರ ಮನೆಗಳು ಹಾಳಾದಂಥ ಸಂದರ್ಭದಲ್ಲಿ ಅದರ ಪಟ್ಟಿಯನ್ನು ಮೀನುಗಾರಿಕಾ ಇಲಾಖೆಯವರು ತಯಾರು ಮಾಡಿ, ಅದನ್ನು ರೆವಿನ್ಯೂ ಇಲಾಖೆಗೆ ಕಳುಹಿಸುವುದರ ಮುಖಾಂತರ ಪರಿಹಾರವನ್ನು ಕೊಡಿಸುವಂಥ ಕೆಲಸ ಮಾಡಬೇಕು. ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು, ಪರಿಹಾರ ಕೊಡುವ ಬಗ್ಗೆ ಹೆಚ್ಚು ಶ್ರಮ ವಹಿಸುವುದಿಲ್ಲ. ಅವರು ಕೊಡುತ್ತಾರೆಂದು ಮೀನುಗಾರಿಕಾ ಇಲಾಖೆಯವರೂ ಕೊಡುವುದಿಲ್ಲ. ಹೀಗಾಗಿ ಎರಡು ಕಡೆ ಪರಿಹಾರ ಇಲ್ಲದ ಹಾಗಾಗುತ್ತದೆ. Your department should take primary interest in forwarding the list of aggrieved persons or victims to the Revenue Department. That would be better. ಸನ್ಮಾನ್ಯ ಸದಸ್ಯರ ಸಲಹೆ ಪ್ರಕಾರ ನಿಮ್ಮ ಇಲಾಖೆಯವರು ಇದರ ಬಗ್ಗೆ ಮುತುವರ್ಜಿ ವಹಿಸಿದರೆ ಪರಿಹಾರ ಕೊಡಲಿಕ್ಕೆ ಸುಲಭವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಇದರ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನನ್ನ ತಾಲ್ಲೂಕಿನಲ್ಲಿ 24 ಮನೆಗಳಿಗೆ ಪರಿಹಾರ ಕೊಟ್ಟಿದ್ದಾರೆ. ಉಳಿದ 7 ವಿಧಾನ ಸಭಾಕ್ಷೇತ್ರಗಳಲ್ಲಿ ಸೇರಿ ಕೇವಲ 8 ಮನೆಗಳಿಗೆ ಪರಿಹಾರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಕಂದಾಯ ಇಲಾಖೆ ಬಹಳ ದೊಡ್ಡ ಇಲಾಖೆ. ಅವರು ಅನೇಕ ಕೆಲಸಗಳಲ್ಲಿ ಇರುವುದರಿಂದ ಈ ಬಗ್ಗೆ ಪೂರ್ತಿ ಗಮನ ಕೊಡುವುದಕ್ಕಾಗುವುದಿಲ್ಲ. ಫಿಷರೀ ಡಿಪಾರ್ಟ್‌ಮೆಂಟ್ ಚಿಕ್ಕದಾಗಿರುವುದರಿಂದ ಅವರು ಈ ಬಗ್ಗೆ ಸ್ವತಃ ಆಸಕ್ತಿ ವಹಿಸಿ ನೊಂದವರ ಪಟ್ಟಿಯನ್ನು ಮಾಡುವ ಜವಾಬ್ದಾರಿ ತೆಗೆದುಕೊಂಡರೆ ಸಮರ್ಪಕವಾದ ಪಟ್ಟಿ ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ರಾಜ್ಯದಲ್ಲಿನ ಪ್ರತಿಯೊಂದು ವಿಧಾನ ಸಭಾಕ್ಷೇತ್ರಕ್ಕೆ ವಿತರಿಸಿದ ಹಣ

315 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಇಲಾಖೆಯಿಂದ ಪ್ರತಿ ವಿಧಾನ ಸಭಾಕ್ಷೇತ್ರಕ್ಕೆ ಈ ಸರ್ಕಾರ ಬಂದ ನಂತರ ಮೀಸಲಿಟ್ಟ ಹಣವೆಷ್ಟು?*

ಆ) *ಇದುವರೆಗೆ ಆಗಿರುವ ಸಾಧನೆ ಏನು; ಜಿಲ್ಲಾವಾರು ವರದಿ ನೀಡುವುದು?*

ಇ) *ಪ್ರತಿ ವಿಧಾನ ಸಭಾಕ್ಷೇತ್ರದ ಗುರಿ 1997-98ನೇ ಸಾಲಿಗೆ ಎಷ್ಟು ನಿಗಧಿಪಡಿಸಲಾಗಿದೆ?*

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಮೀಸಲಿಟ್ಟ ಹಣ 30.00 ಲಕ್ಷ ರೂ. ಗಳು.

ಆ) ಸಾಧನೆ

1995-96	1996-97
	(ಲಕ್ಷ ರೂ.ಗಳಲ್ಲಿ)
8973.76	8574.83

ಜಿಲ್ಲಾವಾರು ವಿವರ ಅನುಬಂಧ -1 ರಲ್ಲಿ ನೀಡಿದೆ.

ಇ) ಅನುಬಂಧ -2 ರಲ್ಲಿ ನೀಡಿದೆ.